ಸಿಗಬೇಕೆನ್ನತಕ್ಕಂಥ ಆಸೆ ಇದೆ. ಆದರೆ ಈಗ ಅಲ್ಲಿರುವ ಹಾಗೆ ಯೂನಿವರ್ಸಿಟಿಯವರು ರೆಸಲ್ಯೂಷನ್ ಮಾಡಿ, ಏನು ತೀರ್ಮಾನ ಮಾಡುತ್ತಾರೆ ಅದರಂತೆ ನಾವು ಮಾಡುತ್ತೇವೆ. ಆದಷ್ಟು ಬೇಗ ನಾವು ಅದನ್ನು ಮಾಡುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್:– ಮಾನ್ಯ ಅಧ್ಯಕ್ಷರೆ, ಇನ್ನೊಂದು ಪ್ರಶ್ನೆ ಇದೆ. ನಿಮ್ಮದು ಒಂದು ಮಾತು ನಾನು ಒಪ್ಪುವುದಿಲ್ಲ. ಯೂನಿವರ್ಸಿಟಿಯವರು ಸರಿಯಾಗಿ ನಡೆಸುತ್ತಿದ್ದಾರೆ ಎಂದು ಹೇಳುತ್ತೀರಿ. ಅವರು ಸರಿಯಾಗಿ ನಡೆಸುತ್ತಿಲ್ಲ. ಇಬ್ಬರೂ ಸೇರಿ ಅಲ್ಲಿಗೆ ಭೇಟಿ ಕೊಟ್ಟು ನೋಡಿ. ಯೂನಿವರ್ಸಿಟಿಯವರು ನಡೆಸುತ್ತಿಲ್ಲ. ಕಾಲೇಜು ಮುಚ್ಚುವುದಕ್ಕೆ ಪ್ರಾರಂಭ ಮಾಡಿದ್ದಾರೆ. ದಯವಿಟ್ಟು ನೀವು ಅದನ್ನು ಸರ್ಕಾರಕ್ಕೆ ಕೊಟ್ಟು ಬಿಡಿ. ಅದು ಸರ್ಕಾರಿ ಹೈಸ್ಕೂಲ್. ಹುಡುಗರಿಗೆ ಅಲ್ಲಿ ಪಿ.ಯು.ಸಿ.ಗೆ ಸೀಟು ಸಿಗದೇ ಅಲೆದಾಡುತ್ತಿದ್ದಾರೆ. ಈಗಾಗಲೇ ಅಲ್ಲಿ 12 ಜನ ಲೆಕ್ಚರರ್ಸ್ ಇದ್ದಾರೆ. ಏನೂ ಖರ್ಚು ಬರುವುದಿಲ್ಲ. ವರದಿಯನ್ನು ಕೊಟ್ಟಿದ್ದೇವೆ. ಶಾಲೆ ನಡೆಸಬಹುದು ಎಂದು ಸವದತ್ತಿ ಕಮಿಟಿಯವರು ವರದಿ ಕೊಟ್ಟಿದ್ದಾರೆ. ಸುಮ್ಮನೆ ಮುಂದಕ್ಕೆ ಹಾಕುತ್ತಿದ್ದಾರೆ. ಯೂನಿವರ್ಸಿಟಿಗೆ ಏನೂ ಖರ್ಚು ಬರುವುದಿಲ್ಲ. ಒಂದು 10–20 ಲಕ್ಷ ರೂಪಾಯಿಗಳನ್ನು ಕೊಡಿ, ದಯವಿಟ್ಟು ಇದೇ ವರ್ಷದಿಂದ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಹೇಳಿಬಿಡಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ:– ಮಾನ್ಯ ಅಧ್ಯಕ್ಷರೆ, ಈ ಸಂಸ್ಥೆಯನ್ನು ಸರ್ಕಾರಕ್ಕೆ ವಹಿಸಿಕೊಳ್ಳುವುದಕ್ಕೆ ಯೂನಿವರ್ಸಿಟಿಯಲ್ಲಿ ಇಟ್ಟು ರೆಸಲ್ಯೂಷನ್ ಪಾಸ್ ಮಾಡಿ ಮಾಡಿಸಿಕೊಡುತ್ತೇವೆ.

ವಿದರ್ಭ ಯೋಜನೆ (ಪ್ರಧಾನಿ ಪ್ಯಾಕೇಜ್)

ಶ್ರೀ ಶಿವರಾಮು ಬಿ. (ಗಂಡಸಿ):–

187(1488) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ವಿದರ್ಭ ಯೋಜನೆ (ಪ್ರಧಾನಿ ಪ್ಯಾಕೇಜ್) ಯಡಿಯಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಿಂದ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಿರುವ ಯೋಜನೆಗಳು ಯಾವುವು; (ಪಟ್ಟಿಯನ್ನು ಒದಗಿಸುವುದು);

(ಆ) ಅವುಗಳ ಮೊತ್ತವೆಷ್ಟು;

(ಇ) ಮಂಜೂರಾತಿ ಯಾವ ಹಂತದಲ್ಲಿದೆ;

(ಈ) ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಯಾವಾಗ ಕಳುಹಿಸಲಾಗುವುದು?

ಶ್ರೀ ಕೆ.ಎಸ್.ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು):-

(ಅ) ಮಾನ್ಯ ಪ್ರಧಾನ ಮಂತ್ರಿಗಳ ವಿಶೇಷ ಪ್ಯಾಕೇಜ್ ಅಡಿಯಲ್ಲಿ ಜಲ ಸಂಪನ್ಮೂಲ ಇಲಾಖೆಯಿಂದ ಪ್ರಸ್ತಾಪಿಸಲಾದ 17 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

(ಅ) Details of 17 Major and Medium Irrigation projects proposed under Hon'ble PM's Special Package in Water Resources Department are enclosed.

(ಇ) ಪ್ರಸ್ತಾಪಿತ ಯೋಜನೆಗಳ ಪ್ರಸ್ತಾವನೆಗಳು ಹಾಗೂ ಯೋಜನಾ ವರದಿಗಳನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದೆ ಹಾಗೂ ಪ್ರಸ್ತಾವನೆಗಳು ವಿವಿಧ ಹಂತದ ಪರಿಶೀಲನೆಯಲ್ಲಿವೆ.

Proposals and Detailed Project Report have been sent to Central Water Commission and the same are under different stages of examination

(ಈ) ವಿವರವಾದ ಪ್ರಸ್ತಾವನೆಗಳನ್ನು 15-07-2006ರಂದು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲಾಗಿದ್ದು, ವಿವರವಾದ ಯೋಜನಾವರದಿಗಳನ್ನು (DPR) ಸಲ್ಲಿಸಲಾದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

Detailed proposals were sent to Central Water commission on 15-07-2006 and the details regarding submission of DPR are furnished in annexure.

ಅನುಬಂಧ

ಪ್ರಧಾನ ಮಂತ್ರಿಗಳ ವಿಶೇಷ ಪ್ಯಾಕೇಜ್ ಯಡಿಯಲ್ಲಿ ಜಲ ಸಂಪನ್ಮೂಲ ಇಲಾಖೆಯಿಂದ ಕೈಗೆತ್ತಿಕೊಳ್ಳಲಾದ ಪ್ರಗತಿಯಲ್ಲಿರುವ 17 ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿವರಗಳು

ಕ್ರ.ಸಂ. ಸಂಖ್ಯೆ	ಜಿಲ್ಲೆ	ಯೋಜನೆಯ ಹೆಸರು	ಪ್ಯಾಕೇಜ್ ಅಡಿಯಲ್ಲಿನ ಅನುದಾನ	ಡಿ.ಪಿ.ಆರ್.ವರದಿಯನ್ನು ಸಲ್ಲಿಸಿದ ದಿನಾಂಕ
1	2	3	4	5
1.	ಬೆಳಗಾವಿ	ದೂದ್‌ಗಂಗಾ	18.90	ಮಹಾರಾಷ್ಟ್ರ ಸರ್ಕಾರಕ್ಕೆ ದಿ:15–05–2007ರಂದು ರಾಜ್ಯದಿಂದ ನಿರಾಪೇಕ್ಷಣಾ ಪತ್ರವನ್ನು ನೀಡಲಾಗಿದೆ (NOC). DPRಅನ್ನು ಮಹಾರಾಷ್ಟ್ರ ಸರ್ಕಾರವು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಿ ಸೂಕ್ತ ಅನುಮೋದನೆ ಪಡೆಯಬೇಕಾಗಿರುತ್ತದೆ
2	ಬೆಳಗಾವಿ	ಘಟಪ್ರಭಾ ಹಂತ 3	79.84	3.07.2007
3	ಬೆಳಗಾವಿ	ಮಲಪ್ರಭಾ	60.49	3.07.2007
4	ಬೆಳಗಾವಿ	ಹಿಪ್ಪರಗಿ	476.80	12.06.2007
5	ಬೆಳಗಾವಿ	ಮಾರ್ಕಂಡೇಯ	28.21	03.07.2007
6	ಬೆಳಗಾವಿ	ಶ್ರೀ ರಾಮೇಶ್ವರ ಏತ	107.01	14–02–2007
7	ಬೆಳಗಾವಿ	ಬಳ್ಳಾರಿ ನಾಲಾ ಏತ	52.67	27–07–2005
8	ಶಿವಮೊಗ್ಗ ಹಾಗೂ ಚಿಕ್ಕಮಗಳೂರು	ಭದ್ರಾ ಆಧುನೀಕರಣ	200.00	03.07–2007
9	ಚಿತ್ರದುರ್ಗ	ಭೀಮಸಮುದ್ರ ಕೆರೆಯ ಜೀರ್ಣೋದ್ಧಾರ	2.00	07.04.2007
10	ಹಾಸನ ಮತ್ತು ಕೊಡಗು	ಹಾರಂಗಿ	6.29	03.07.2007
11	ಹಾಸನ	ಹೇಮಾವತಿ	53.00	03.07.2007
12	ಹಾಸನ	ಯಗಚಿ	65.11	03.07.2007
13	ಹಾಸನ	ಕಾಮಸಮುದ್ರ ಏತ	9.21	05.06.2007
14	ಹಾಸನ	ಹುಚ್ಚನಹೊಪ್ಪಲು ಏತ	7.00	05.06.2007
15	ಹಾಸನ	ವಾಟೆಹೊಳೆ	1.50	05.06.2007
16	ಹಾಸನ	ಕಾಚೇನಹಳ್ಳಿ ಏತ	39.94	05.06.2007
17	ಕೊಡಗು	ಚಿಕ್ಲಿಹೊಳೆ	0.75	05.06.2007
	ಒಟ್ಟು		1208.71	

ಶ್ರೀ ಬಿ.ಶಿವರಾಮು:– ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರಧಾನ ಮಂತ್ರಿಗಳ ವಿಶೇಷ ಪ್ಯಾಕೇಜ್ ಯೋಜನೆ ಅಡಿಯಲ್ಲಿ ಭಾರೀ ಮತ್ತು ಮಧ್ಯಮ ಜಲಸಂಪನ್ಮೂಲ ಇಲಾಖೆಯಿಂದ 17 ಯೋಜನೆಗಳನ್ನು 1208 ಕೋಟಿ ರೂಪಾಯಿಗಳಿಗೆ ತೆಗೆದುಕೊಂಡಿದೆ ಎನ್ನುವುದನ್ನು ಹೇಳುವುದರ ಮೂಲಕ ದಿನಾಂಕ 15–7–2006ರಲ್ಲಿ Central Water commission ಗೆ DPR ಅನ್ನು ಸಬ್‌ಮಿಟ್ ಮಾಡಿದ್ದೇವೆ ಎಂದು ಹೇಳುತ್ತಾರೆ. ಈ ಪ್ರಧಾನ ಮಂತ್ರಿಗಳ ಪ್ಯಾಕೇಜ್ ಯೋಜನೆ ಯಾವಾಗ ಮಂಜೂರಾಗಿದೆ? ನೀವೇನು ಈ ಯೋಜನೆಗೆ 1208 ಕೋಟಿ ರೂಪಾಯಿಗಳನ್ನು ಒದಗಿಸಿಕೊಂಡಿದ್ದೀರಿ, ಇದನ್ನು ಕೇಂದ್ರ ಸರ್ಕಾರದ ಹಣದಿಂದ ಮಾಡುತ್ತಿದ್ದೀರೋ ಅಥವಾ ಸಾಲದ ರೂಪದಲ್ಲೇನಾದರೂ ಹಣವನ್ನು ಪಡೆಯುತ್ತಿದ್ದೀರಾ? ಮೂರನೆಯದಾಗಿ ಈ ಯೋಜನೆ ಅನುಷ್ಠಾನಕ್ಕೆಂದೇ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಸರ್ಕಾರದಲ್ಲಿ ಮಾಡಿದ್ದರೂ ಕೂಡ, ಈಗಾಗಲೇ 8 ತಿಂಗಳುಗಳು ಕಳೆದಿದ್ದರೂ ಕೂಡ ನೀವು ಈಗ ದಿನಾಂಕ 15ರ ಜುಲೈನಲ್ಲಿ ತಾವು ಡಿ.ಪಿ.ಆರ್. ಅನ್ನು ಸೆಂಟ್ರಲ್ ಕಮಿಶನ್‌ಗೆ ಸಬ್‌ಮಿಟ್ ಮಾಡುತ್ತಿದ್ದೇವೆ ಎಂದು ಉತ್ತರದಲ್ಲಿ ಹೇಳಿದರೆ, ನೀವು ಎಷ್ಟು ದಿವಸದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸುತ್ತೀರಿ? ಇವತ್ತು ಈ ರಾಜ್ಯದಲ್ಲಿ ರೈತರ ಆತ್ಮಹತ್ಯೆ ಸಂಖ್ಯೆ ಹೆಚ್ಚುತ್ತಿದೆ. ಆ ಹಿನ್ನೆಲೆಯಲ್ಲಿಯೇ ಈ ಪ್ಯಾಕೇಜ್ ಯೋಜನೆಗೆ ಮಂಜೂರಾತಿಯನ್ನು ಕೊಟ್ಟಿರುವುದು.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಕರ್ನಾಟಕ ರಾಜ್ಯದಲ್ಲಿ ರೈತರ ಆತ್ಮಹತ್ಯೆಯ ಹಿನ್ನೆಲೆಯಲ್ಲಿ ಪ್ರಧಾನ ಮಂತ್ರಿಗಳ ಪ್ಯಾಕೇಜ್ ಅನ್ನು ಏನು ಮಾಡಲಾಗಿದೆ ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇಡೀ ಸದನ ಈ ವಿಷಯದ ಮೇಲೆ ಗಮನ ಕೊಡಬೇಕೆಂದು ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರೈತರ ಆತ್ಮಹತ್ಯೆ ಹಿನ್ನಲೆಯಲ್ಲಿ ಪ್ರಧಾನ ಮಂತ್ರಿಗಳ ಪ್ಯಾಕೇಜ್‌ನಲ್ಲಿ 2552 ಕೋಟಿ ರೂಪಾಯಿಗಳನ್ನು ನಾವು ಕೇಳಿ ಪ್ರಸ್ತಾವನೆ ಕಳುಹಿಸಿದ್ದು. ಅವರು ಸ್ಯಾಂಕ್ಷನ್ ಮಾಡಿರುವುದು 50% ಗಿಂತ ಕಡಿಮೆ, ಅಂದರೆ 1208.71 ಕೋಟಿ ರೂಪಾಯಿಗಳನ್ನು ಮಾತ್ರ ಕಡೆಗೆ ಟ್ರಿಬ್ಯುನಲ್ ಇದ್ದಾಗಲೇ 10.10.2006ರಲ್ಲಿ ಇದನ್ನು ಸ್ಯಾಂಕ್ಷನ್ ಆಗಿದೆಯೆಂದು ಪತ್ರವನ್ನು ಕಳುಹಿಸಿಕೊಟ್ಟರು. 28.12.2006ರಲ್ಲಿ ಮತ್ತೆ 17 ಪ್ಯಾಕೇಜ್ ಬಗ್ಗೆ ಒಪ್ಪಿಗೆಯನ್ನು ಕೊಟ್ಟರು. 05.02.2007, ತಮಗೆ ಗೊತ್ತಿದೆ. ಕಾವೇರಿ ನ್ಯಾಯಾಧೀಕರಣದ ತೀರ್ಪು ಬಂತು. ಈ ತೀರ್ಪು ಬಂದ ನಂತರ ಕೂಡ ಅವರು ಏನು ಹೇಳಿದರೆಂದರೆ, 16.05.2007 ರಲ್ಲಿ, revised detail project ಅನ್ನು ಕಳುಹಿಸಿಕೊಡಿ ಎಂದು ಹೇಳಿ ಮತ್ತೆ ಕಳುಹಿಸಿಕೊಟ್ಟರು. ನಾವೂ ಕೂಡ ಅದನ್ನು ಕಳುಹಿಸಿಕೊಟ್ಟೆವು. ಅದನ್ನು ಕಳುಹಿಸಿದ ಮೇಲೆ ಅವರು ನಮಗೆ

ಪತ್ರ ಬರೆದು, ನೀವು ಒಂದು ಸೆಟ್ ಕಳುಹಿಸಿಕೊಟ್ಟಿದ್ದೀರಿ, 15 ಸೆಟ್ ಕಳುಹಿಸಿಕೊಡಿ ಎಂದು ಹೇಳಿದರು. ನಾನು ಏತಕ್ಕೆ ಇದನ್ನು ಹೇಳುತ್ತಿದ್ದೇನೆಂದು ಶಿವರಾಮ್‌ರವರೆ, ದಯವಿಟ್ಟು ಕೇಳಿ. 15 ಸೆಟ್ ಕಳುಹಿಸಿಕೊಡಿ ಎಂದು ಕೇಳಿದ್ದಕ್ಕೆ ನಾವು 15 ಸೆಟ್ ಅನ್ನೂ ಕಳುಹಿಸಿಕೊಟ್ಟೆವು. ಮಾನ್ಯ ಅಧ್ಯಕ್ಷರೆ, ಟ್ರಿಬ್ಯುನಲ್ ತೀರ್ಪು ಬಂದ ನಂತರ ಬಂದಿರುವ ತುಂಬಾ ಆಘಾತಕಾರಿಯಾದ ಒಂದು ಸುದ್ದಿಯನ್ನು ನಿಮಗೆ ಹೇಳುತ್ತೇನೆ. 19.07.2007ರಲ್ಲಿ ಒಂದು ಪತ್ರವನ್ನು ನಮಗೆ ಬರೆದಿದ್ದಾರೆ. ಆ ಪತ್ರದಲ್ಲಿರುವ ಎಲ್ಲ ವಿವರಗಳನ್ನು ಈಗ ಇಲ್ಲಿ ಹೇಳದೇ ಕೊನೆಯಲ್ಲಿ ಇರುವ ವಾಕ್ಯಗಳನ್ನು ಸಭೆಯಲ್ಲಿ ಓದಿ ಹೇಳುತ್ತೇನೆ. ಅದರಲ್ಲಿ ಏನು ಹೇಳಿದ್ದಾರೆಂದರೆ, "As such prior consent of the Tribunal will be necessary for appraisal of the projects which are in Cauvery basin." ಕಾವೇರಿ ಬೇಸಿನ್‌ನಲ್ಲಿ ಬರುವಂಥ ಯೋಜನೆಗಳ ಬಗ್ಗೆ ಹಣ ಕೊಡಬೇಕಾದರೆ ಟ್ರಿಬ್ಯುನಲ್‌ನವರಿಂದ ನಾವು ಒಪ್ಪಿಗೆಯನ್ನು ಪಡೆದುಕೊಳ್ಳಬೇಕಂತೆ. ಅವರಿಂದ ಅಪ್ರೈಸಲ್ ತೆಗೆದುಕೊಳ್ಳಬೇಕಂತೆ ತಮಗೂ ಗೊತ್ತಿದೆ, ನ್ಯಾಯಾಧೀಕರಣದ ತೀರ್ಪು ಸರಿ ಇಲ್ಲವೆಂದು ಹೇಳಿ ನಾವು ಸುಪ್ರೀಂಕೋರ್ಟ್‌ಗೆ ಹೋಗಿದ್ದೇವೆ. ಸುಪ್ರೀಂ ಕೋರ್ಟ್‌ಗೆ ಹೋಗಿರುವಂಥ ಈ ಸಂದರ್ಭದಲ್ಲಿ ನೀವು ನ್ಯಾಯಾಧೀಕರಣ ಒಪ್ಪಿಗೆಯನ್ನು ತೆಗೆದುಕೊಂಡು ನಮಗೆ ಕೊಡಿ ಎಂದರೆ ಈ ಸಂದರ್ಭದಲ್ಲಿ ನ್ಯಾಯಾಧೀಕರಣದವರು ನಮಗೆ ಒಪ್ಪಿಗೆ ಕೊಡುತ್ತಾರೆಯೇ? ಕೇಂದ್ರ ಸರ್ಕಾರದವರು ಅವತ್ತಿನಿಂದ ಇವತ್ತಿನವರೆಗೆ ಏನೇನು ಮಾಹಿತಿಗಳನ್ನು ಕೇಳಿದ್ದಾರೋ ಅವೆಲ್ಲವನ್ನೂ ನಾವು ಕೊಡುತ್ತಲೇ ಬಂದಿದ್ದೇವೆ. ನಾನು ತುಂಬಾ ನೊಂದು ಹೇಳುತ್ತೇನೆ, ಕೇಂದ್ರ ಸರ್ಕಾರದವರಿಗೆ ಕರ್ನಾಟಕದ ಪ್ರಾಜೆಕ್ಟ್‌ಗಳನ್ನು ಮುಗಿಸುವುದಕ್ಕೆ ಅವರಿಗೆ ಆಸಕ್ತಿ ಇಲ್ಲ. ಒಂದು ರೂಪಾಯಿಯನ್ನೂ ಕೂಡ ಇವತ್ತಿನವರೆಗೆ ಕೊಟ್ಟಿಲ್ಲ, ಕೊಡುತ್ತಾರೋ ಇಲ್ಲವೋ ನನಗೆ ಅನುಮಾನ. ಏಕೆಂದರೆ ಕಾವೇರಿ ನ್ಯಾಯಾಧೀಕರಣದ ಒಪ್ಪಿಗೆಯನ್ನು ಪಡೆದುಕೊಂಡು ನಮಗೆ ಕಳುಹಿಸಿ ಎಂದು ಅವರು ಹೇಳಿದರೆ ಹೇಗೆ? ಶಿವರಾಮ್‌ರವರೆ, ತಾವೇ ಹೇಳಿ, ಸುಪ್ರೀಂಕೋರ್ಟ್‌ನಲ್ಲಿರುವಂಥ ಈ ಸಂದರ್ಭದಲ್ಲಿ ಟ್ರಿಬ್ಯುನಲ್‌ನವರು ನಮಗೆ ಒಪ್ಪಿಗೆಯನ್ನು ಕೊಡುತ್ತಾರೆಯೇ? ಆದಕಾರಣ ನಾನು ಇಡೀ ಸದನಕ್ಕೆ ಪ್ರಾರ್ಥನೆ ಮಾಡುತ್ತಿದ್ದೇನೆ. ಈಗ ಪ್ರಶ್ನೋತ್ತರ ವೇಳೆ ಆಗಿದ್ದರೂ ನಾನು ಪ್ರಾರ್ಥನೆ ಮಾಡುತ್ತೇನೆ. ಕೇಂದ್ರ ಸರ್ಕಾರ ತೋರಿಸುತ್ತಿರತಕ್ಕಂಥ ಈ ಮಲತಾಯಿ ಧೋರಣೆ ಏನಿದೆ, ಇದನ್ನು ಅನೇಕ ವಿಚಾರಗಳಲ್ಲಿ ಮಾಡಿಕೊಂಡು ಬಂದಿದ್ದಾರೆ, ನಾನು ಈಗ ಆ ಎಲ್ಲ ವಿವರಗಳಿಗೆ ಹೋಗುವುದಿಲ್ಲ. ಈ ಮಲತಾಯಿ ಧೋರಣೆ ಮಾಡುತ್ತಿರುವ ಬಗ್ಗೆ ಸ್ಪಷ್ಟವಾಗಿ ಕೇಂದ್ರ ಸರ್ಕಾರದ ಗಮನಕ್ಕೆ ನಾವು ತಂದು ಅವರು ಏನು ಕಂಡೀಶನ್

ಹಾಕಿದ್ದಾರೆ, ಅದನ್ನು ವಿತ್‌ಡ್ರಾ ಮಾಡಿಕೊಂಡು ನಮಗೆ ಹಣವನ್ನು ಸ್ಯಾಂಕ್ಷನ್ ಮಾಡಿಕೊಡಬೇಕು ಎನ್ನುವ ದಿಕ್ಕಿನಲ್ಲಿ ನಾವೆಲ್ಲರೂ ಪಕ್ಷಾತೀತವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ಮಾಡಬೇಕು. ನಾವೆಲ್ಲರೂ ಕೂಡ ಒಟ್ಟಾಗಿ ಈ ಕೆಲಸವನ್ನು ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಎರಡು ಸಲ, ಮೂರು ಸಲ ಪ್ರಪೋಸಲ್ ಹೋದಾಗ ಕೇಂದ್ರ ಸರ್ಕಾರದವರು 1208 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ ಆ ನಂತರ ಕೊಡುವುದಕ್ಕೆ ಆಗುವುದಿಲ್ಲ ಎನ್ನುವುದರ ಮಧ್ಯೆ ಇನ್ನೂ ನ್ಯಾಯಾಧೀಕರಣದ ತೀರ್ಪು ಇತ್ಯರ್ಥ ಆಗಿರಲಿಲ್ಲ. ಅಷ್ಟರೊಳಗೇ ಈ ಡಿಸ್‌ಪ್ಯೂಟ್ಸ್‌ಗಳೆಲ್ಲಾ ನಡೆಯುತ್ತಿತ್ತು. ಈಗಾಗಲೇ ಅದು ಇತ್ಯರ್ಥ ಆಗಿದೆ. ನಾವು ರಿವ್ಯೂ ಕೇಳಿರುವುದನ್ನು ಬಿಟ್ಟರೆ ಇತ್ಯರ್ಥವಾಗಿಲ್ಲವೆಂದು ಭಾವಿಸುವುದಕ್ಕಾಗುವುದಿಲ್ಲ. ನಾವು ಹೆಚ್ಚು ನೀರನ್ನು ಕೇಳಿದ್ದೇವೆ. 270 ಟಿ.ಎಂ.ಸಿ. ಯೊಳಗೆ ನಾವು ಪ್ರಾಜೆಕ್ಟ್ ಮಾಡುವುದಕ್ಕೆ ಅವರು ಅಪ್ರೈಸ್ ಮಾಡುವುದಿಲ್ಲ, ಫಂಡ್ಸ್ ಕೊಡುವುದಿಲ್ಲ. ಹಿಂದೆಯೂ ಕೂಡ ಹೀಗೇ ಆಯಿತು. ಯಾವುದೇ ನಮ್ಮ ಯೋಜನೆಗೆ ಕೇಂದ್ರ ಸರ್ಕಾರದ ನೆರವು ನಮಗೆ ಸಿಗಲಿಲ್ಲ, ಟ್ರಿಬ್ಯುನಲ್‌ನಲ್ಲಿದೆ, ಟ್ರಿಬ್ಯುನಲ್‌ನಲ್ಲಿದೆ, ಟ್ರಿಬ್ಯುನಲ್‌ನಲ್ಲಿದೆ ಎಂದು ಹೇಳುತ್ತಿದ್ದರು. ಇವತ್ತು ಕೂಡ ಅದೇ ಕಾರಣವನ್ನು ಇಟ್ಟುಕೊಂಡು ಅವರು ಈ ರೀತಿ ಮಾಡುತ್ತಿದ್ದರೆ, ಹಾಗಾದರೆ ಬೇರೆ ರಾಜ್ಯಗಳ ಸ್ಕೀಂಗಳನ್ನು ಅಪ್ರೂವ್ ಮಾಡಿದ್ದಾರೋ ಇಲ್ಲವೋ ಎಂಬುದನ್ನು ಹೇಳಬೇಕಾಗುತ್ತದೆ. ಅಲ್ಲಿ ನಮ್ಮ ಕೃಷ್ಣಾ ಟ್ರಿಬ್ಯುನಲ್ ಇದೆ, ಆಂಧ್ರಪ್ರದೇಶದ ಪ್ರಾಜೆಕ್ಟ್‌ನ್ನು ಅವರು ಅಪ್ರೈಸ್ ಮಾಡಲಿಲ್ಲವೇ? ತಮಿಳುನಾಡಿನ ಪ್ರಾಜೆಕ್ಟ್‌ನ್ನು ಅಪ್ರೈಸ್ ಮಾಡಲಿಲ್ಲವೇ? ಕರ್ನಾಟಕ ಒಂದಕ್ಕೆ ಈ ರೀತಿ ಮಾಡುತ್ತಿದ್ದಾರೆಂದರೆ ಏನು ಕಾರಣವೆಂದು ಇವತ್ತು ಇತ್ಯರ್ಥವಾಗಬೇಕು. 500, 600 ಕೋಟಿಯಿಂದ 1200 ಕೋಟಿಗೆ ಈಗ ನಿಲ್ಲಿಸಿ ಒಂದು ರೂಪಾಯಿಯನ್ನೂ ಕೊಡುವುದಿಲ್ಲವೆನ್ನುವುದಾದರೆ, it has to be decided. ಕೊಡುತ್ತಾರೋ ಇಲ್ಲವೋ ಕೇಳಬೇಕು, ನಾವೇನು ಅದರ ಅವಿಭಾಜ್ಯ ಅಂಗವೋ ಇಲ್ಲವೋ, ನಮ್ಮ ರಾಜ್ಯ ಭಾರತ ದೇಶದ ಅವಿಭಾಜ್ಯ ಅಂಗವೋ ಇಲ್ಲವೋ ಇತ್ಯರ್ಥವಾಗಬೇಕು. ಮಾನ್ಯ ಮಂತ್ರಿಗಳು ಈ ದಿಕ್ಕಿನಲ್ಲಿ ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ, ಏನು ಒತ್ತಾಯವನ್ನು ಅವರ ಮೇಲೆ ಹಾಕಿದ್ದೀರಿ ಎಂಬ ಬಗ್ಗೆ ದಯವಿಟ್ಟು ಸದನದಲ್ಲಿ ಹೇಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ, ನಾನು ಮುಖ್ಯವಾಗಿ ಕೇಳುವುದೇನೆಂದರೆ, ಅವರು 22–07–2005ರಲ್ಲಿ ಒಂದು ಲೆಟರ್ ಬರೆದಿದ್ದಾರೆ. ಅದರಲ್ಲಿ "The Tribunal has been constituted for the first time for examining the issue related to

the inter state allocation of water. CWC shall not consult techno-economic clearance" ಎಂದು ಹೇಳಿದ್ದಾರೆ. ಇದು ಇಷ್ಟು absurd ಆಗಿದೆಯೆಂದರೆ, ಕೇಂದ್ರ ಸರ್ಕಾರಕ್ಕೆ ಮತ್ತು ಇಡೀ ದೇಶಕ್ಕೇ ಗೊತ್ತಿದೆ, ಇದು ಟ್ರಿಬ್ಯುನಲ್‌ನಲ್ಲಿ ಇದೆ, ತಕರಾರು ನಡೆಯುತ್ತಿದೆಯೆಂದು. ನೀವು ಇದು ಇದ್ದಾಗ ಬೇರೆ ರಾಜ್ಯಗಳಿಗೆ ಕೊಟ್ಟಿದ್ದೀರಿ, ಆಂಧ್ರಕ್ಕೆ ಹೇಗೆ ಕೊಟ್ಟಿರಿ? Pool over project ಗೆ ಎಲ್ಲಿಂದ ಯಾವ ಟ್ರಿಬ್ಯುನಲ್‌ನಿಂದ ನೀವು ಕೊಟ್ಟಿರಿ? ಬೇರೆಯದಕ್ಕೆಲ್ಲಾ ನೀವು ಹೇಗೆ ಕೊಟ್ಟಿರಿ? ಅದೆಲ್ಲಾ ಇದರಲ್ಲಿಯೇ ಸೇರುತ್ತದೆ. ಇವರೇನು ಈ ಪ್ಯಾರಾದಲ್ಲಿ ಹೇಳಿದ್ದಾರೆ, ಇವೆಲ್ಲವೂ ಕೂಡ Pool over project ಸೇರಿಕೊಂಡು ಬೇರೆ ಬೇರೆ ರಾಜ್ಯದ ಪ್ರಾಜೆಕ್ಟ್‌ಗಳು ಕೂಡ ಈ ಕ್ಯಾಟಗರಿಯಲ್ಲಿ ಬರುತ್ತದೆ. ಆದರೂ ಕೂಡ particularly, ಈ ಸಿ.ಡಬ್ಲ್ಯೂ.ಸಿ.ಯಲ್ಲಿ ಕರ್ನಾಟಕ ರಾಜ್ಯದ ನೀರಾವರಿ ಯೋಜನೆಗಳು ಎಂದರೆ ಸಾಕು ಅವರಿಗೆ ಹಿಡಿಸುವುದಿಲ್ಲ. ಇದೊಂದೇ ಯೋಜನೆ ಪ್ರಶ್ನೆಯಲ್ಲ. ಬೇರೆ ನೀರಾವರಿ ಯೋಜನೆಗಳ ಬಗ್ಗೆಯೂ ಕೂಡ ಅವರು ಹೀಗೆ ಮಾಡುವುದು. ಆದುದರಿಂದ ನಾವು ಈ ಸದನದ ಮುಖಾಂತರ ಕೇಂದ್ರ ಸರ್ಕಾರಕ್ಕೆ ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ನೀರಾವರಿ ಯೋಜನೆಗಳನ್ನು ನೀವು ಡಿಸ್‌ಪ್ಯೂಟ್ ಇದೆ ಎನ್ನುವ ಕಾರಣಕ್ಕೆ ತಡೆಯೊಡ್ಡಿದರೆ ನಮ್ಮ ರಾಜ್ಯದಲ್ಲಿ ಒಂದೇ ಒಂದು ನೀರಾವರಿ ಯೋಜನೆಯನ್ನೂ ಕೂಡ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ಡಿಸ್‌ಪ್ಯೂಟ್‌ಗಳಿಗೂ ಮತ್ತು ಹಣ ಬಿಡುಗಡೆ ಮಾಡುವುದಕ್ಕೂ ಸಂಬಂಧವಿಲ್ಲವೆಂದು ಹೇಳಿ ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕು ಎಂದು ಈ ಸದನದ ಮುಖಾಂತರ ಹೇಳಬೇಕಾಗುತ್ತದೆ.

ಶ್ರೀ ಬಿ.ಶಿವರಾಮು:– ಮಾನ್ಯ ಅಧ್ಯಕ್ಷರೆ, ಈ ಪ್ಯಾಕೇಜ್‌ನ್ನು ಪರಿಶೀಲಿಸುವುದಕ್ಕೋಸ್ಕರ ಪ್ರಧಾನ ಮಂತ್ರಿಗಳು ಕರ್ನಾಟಕಕ್ಕೆ 3ನೇ ತಾರೀಖು ಬರುತ್ತಿರುವುದು ಪ್ರಕಟಣೆಗೊಂಡಿದ್ದು, ಇದು ನಮಗೆಲ್ಲರಿಗೂ ತಿಳಿದಿರತಕ್ಕಂಥ ವಿಚಾರವಾಗಿದೆ. ಪ್ರಧಾನ ಮಂತ್ರಿಗಳಿಗೆ ಇದರ ಬಗ್ಗೆ ಅಷ್ಟು ಆಸಕ್ತಿ ಇದೆ ಎಂದ ಮೇಲೆ ಸರ್ಕಾರಕ್ಕೆ ಸದರಿ ವಿಷಯವನ್ನು ಅವರ ಗಮನಕ್ಕೆ ತರುವುದರ ಮೂಲಕ, ತಮ್ಮ ಭಾವನೆಯಲ್ಲಿ ಸಿ.ಡಬ್ಲ್ಯೂ.ಸಿ.ಯಲ್ಲಿ ಏನಾದರೂ ಮಲತಾಯಿ ಧೋರಣೆ ನಡೆಯುತ್ತಿದೆಯೆಂದರೆ judicious ಆಗಿ ಅವರ ಹತ್ತಿರ ಡಿಮ್ಯಾಂಡ್ ಮಾಡುವುದಕ್ಕೆ ನಮಗೆ ಎಲ್ಲ ಹಕ್ಕೂ ಕೂಡ ಇದೆ. ಕಾರಣ ಏನೆಂದರೆ, ಈಗಾಗಲೇ ಆಂಧ್ರವಿರಬಹುದು, ಮಹಾರಾಷ್ಟ್ರ ಇರಬಹುದು, ಈಗ ತಾವು ಒಂದು ಡಿ.ಪಿ.ಆರ್. ಪ್ರಪೋಸಲ್ ಅನ್ನು ಮಹಾರಾಷ್ಟ್ರ ಸರ್ಕಾರಕ್ಕೂ ಕೂಡ ಕಳುಹಿಸತಕ್ಕಂಥದ್ದನ್ನು ಮಾಡಿದ್ದೀರಿ. ಅಂದರೆ ಈಗ ನನ್ನ ಒತ್ತಾಯವೇನೆಂದರೆ, ಪ್ರಧಾನಮಂತ್ರಿಗಳು ಕರ್ನಾಟಕಕ್ಕೆ ಬಂದಾಗ ಈ ಒಂದು ರೈತರ ಆತ್ಮಹತ್ಯೆ ಹಿನ್ನಲೆಯಲ್ಲಿ ಈ ವಿಚಾರವನ್ನು ಅವರ ಗಮನಕ್ಕೆ ತರುವುದರ ಮೂಲಕ

ಈ ಸಿ.ಡಬ್ಲ್ಯೂ.ಸಿ.ಯಲ್ಲಿ ಒಪ್ಪಿಗೆ ಪಡೆಯತಕ್ಕಂಥದ್ದಕ್ಕೆ ಬಹಳ ಸೀರಿಯಸ್ ಆದಂಥ ಒತ್ತಾಯವನ್ನು ಅವರ ಮೇಲೆ ತರಬೇಕಾಗುತ್ತದೆ, ನಾವು ಫಾಲೋ ಅಪ್ ಕೂಡ ಮಾಡಬೇಕಾಗುತ್ತದೆ. ಮಾನ್ಯ ಸಚಿವರಲ್ಲಿ ಇದು ನನ್ನ ಮನವಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವರಾಂರವರಿಗೂ ಗೊತ್ತು. ಕಳಸಾ ಬಂಡೂರಿ ಸಮಸ್ಯೆಯಾದಾಗಲೂ ಕೂಡ ಇಡೀ ಸದನದಲ್ಲಿ ಎಲ್ಲರೂ ಒಪ್ಪಿಕೊಂಡೆವು. ಪ್ರಧಾನಮಂತ್ರಿಗಳಿಗೆ ಹೇಳಿದೆವು, ನಮಗೆ ಅನ್ಯಾಯವಾಗುತ್ತಿದೆ, ಗೋವಾದವರು ಸುಪ್ರೀಂಕೋರ್ಟ್‌ಗೆ ಹೋಗುತ್ತಾರೆ, ಕುಡಿಯುವ ನೀರಿಗೆ ಕೊಡಿ, 200 ಟಿ.ಎಂ.ಸಿ. ನೀರು ಸಮುದ್ರಕ್ಕೆ ಹೋಗುತ್ತಿದೆ, 7.5 ಟಿ.ಎಂ.ಸಿ. ನೀರನ್ನು ನಮಗೆ ಕುಡಿಯುವುದಕ್ಕೆ ಕೊಡಿ ಎಂದು ನಾವೆಲ್ಲ ಅವರಲ್ಲಿ ಮನವಿ ಮಾಡಿಕೊಂಡಾಗ ಅವರು ಏನು ಹೇಳಿದರೆಂದರೆ, ಖಂಡಿತ ಈ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತೇನೆ, ಗೋವಾ ಮುಖ್ಯಮಂತ್ರಿಯವರನ್ನು ಕರೆದು ಮಾತನಾಡುತ್ತೇನೆ ಎಂದರು. ಆದರೆ ಇವತ್ತಿನ ತನಕ ಏನನ್ನೂ ಮಾಡಲಿಲ್ಲ. ಆದರೂ ಕೂಡ ಶಿವರಾಂರವರೆ ತಾವು ಹೇಳುತ್ತಿದ್ದೀರಿ, ಪ್ರಧಾನ ಮಂತ್ರಿಗಳು ಬಂದಾಗ ಖಂಡಿತಾ ಅವರ ಹತ್ತಿರ ಮಾತನಾಡೋಣ, ಒತ್ತಾಯ ಮಾಡೋಣ. ಪ್ರಶ್ನೆ ಅದಲ್ಲ, ಇವತ್ತು ನಾನು ಅದಕ್ಕೋಸ್ಕರವೇ ಹೇಳುವುದಕ್ಕೆ ಹೊರಟಿರುವುದು, ಈ ಒಂದು ಆಘಾತಕಾರಿಯಾದ ಪತ್ರವೇನು ಇದೆಯಲ್ಲ, ಈ ಪತ್ರವನ್ನು ನೋಡಿದರೆ ಸ್ವಾಭಾವಿಕವಾಗಿ ಕಾವೇರಿ ಬೇಸಿನ್‌ನಲ್ಲಿರುವಂಥ ಎಲ್ಲರಿಗೂ ಕೂಡ, ನಮಗೆ ಇನ್ನು ಇವರು ಹಣ ಕೊಡುವುದಿಲ್ಲವೆಂದು ತೀರ್ಮಾನವಾಗಿ ಹೋಯಿತು ಎನ್ನುವಂಥ ಸ್ಥಿತಿಗೆ ಇವರು ತಂದಿದ್ದಾರೆ. ಅದಕ್ಕೋಸ್ಕರ ಪ್ರಧಾನ ಮಂತ್ರಿಗಳು ಬಂದಾಗ ಖಂಡಿತಾ ತಾವು ಹೇಳಿದಂತೆ ಪ್ರಯತ್ನವನ್ನು ಮಾಡೋಣ. ನಾನು ಬೇಡವೆನ್ನುವುದಿಲ್ಲ. ಆದರೆ ಈ ದಿಕ್ಕಿನಲ್ಲಿ ಇಡೀ ಸದನ ಮತ್ತು ಇಡೀ ಕರ್ನಾಟಕ ರಾಜ್ಯ ಒಗ್ಗಟ್ಟಾಗಿ ಕೇಂದ್ರ ಸರ್ಕಾರ ಮಾಡುತ್ತಿರುವಂಥ ಮಲತಾಯಿ ಧೋರಣೆ ಬಗ್ಗೆ ತಿಳಿಸಬೇಕು. ಏಕೆಂದರೆ ಈಗ ಅವರು ಹೇಳಿರುವುದನ್ನು ನೋಡಿದರೆ ಖಂಡಿತ ನಮಗೆ ಅನ್ಯಾಯವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ತಾವು ಒಂದು ಸಾರಿ ಸರ್ವ ಪಕ್ಷಗಳ ನಿಯೋಗವನ್ನು ಮಾಡಿ ಪ್ರಧಾನ ಮಂತ್ರಿಯವರಲ್ಲಿ ಏನೇನು ಅಭಿಪ್ರಾಯಗಳು ಇವೆ ಎಂಬುದನ್ನು ಕೇಳಿ, ನಮ್ಮ ಪರಿಸ್ಥಿತಿ ಈ ತರಹ ಇದೆ ಎಂಬುದನ್ನು ಹೇಳಬೇಕು. ನೀವೇನು ಕೇವಲ ತಮಿಳುನಾಡಿನ ಪರ ಇದ್ದೀರೋ, ಆಂಧ್ರದವರ ಪರ ಇದ್ದೀರೋ, ಕರ್ನಾಟಕವನ್ನು ಏಕೆ ಕಡೆಗಾಣಿಸಿದ್ದೀರಿ ಎಂದು ಅವರನ್ನು ಸ್ಪಷ್ಟವಾಗಿ, ನೇರವಾಗಿ ಕೇಳೋಣ.

ಅಧ್ಯಕ್ಷರು:–ವಾಟಾಳ್ ನಾಗರಾಜ್‌ರವರೆ, ನೀವು ಹೊರಗಡೆಯಿಂದ ಒಳಗೆ ಬಂದ ತಕ್ಷಣ ನನ್ನ ಅನುಮತಿಯನ್ನೂ ಪಡೆಯದೇ ಹೀಗೆ ಏಕಾ ಏಕಿ ಎದ್ದು ನಿಂತು ಮಾತನಾಡಿದರೆ ಹೇಗೆ? ಇದು ಸರಿಯಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಈಶ್ವರಪ್ಪನವರೇ, ಕಳಸಾಬಂಡೂರಿ ಪ್ರಧಾನಮಂತ್ರಿಗಳೇ ಕ್ಲಿಯರ್ ಮಾಡಿ ಪ್ರಧಾನ ಮಂತ್ರಿಗಳೇ ಸ್ಟೇ ಕೊಟ್ಟಿರುವ ಪ್ರಾಜೆಕ್ಟ್, ಆನ್ ಗೋಯಿಂಗ್ ಪ್ರಾಜೆಕ್ಟ್‌ಗೆ ನೀವೇನು ಸ್ಟೇ ಕೊಟ್ಟಿದ್ದೀರಿ, ಅದನ್ನು ಕ್ಲಿಯರ್ ಮಾಡಿ ಎಂದು ಪ್ರಧಾನ ಮಂತ್ರಿಗಳಿಗೆ ನೀವು ಹೇಳಬೇಕು. ಏಕೆಂದರೆ it is cleared by the Prime Minister's office. ಆಮೇಲೆ ಅದಕ್ಕೆ ಸ್ಟೇ ಕೊಟ್ಟಿರುವುದು.

ಶ್ರೀ ಬಿ.ಶಿವರಾಮು:– ಈಗ ಪ್ರಧಾನ ಮಂತ್ರಿಗಳೇ ಕರ್ನಾಟಕಕ್ಕೆ ಬರುತ್ತಿರುವುದು ನಮಗೆ ಒಂದು ಸದವಕಾಶ. ಅವರು ಬಂದಾಗ ಅವರಿಗೆ ಈ ವಿಚಾರವನ್ನು ಹೇಳಿ ಕನ್‌ವಿನ್ಸ್ ಮಾಡಬಹುದು. ಕನ್‌ವಿನ್ಸ್ ಮಾಡಿ ಒತ್ತಡ ತಂದು ಇದಕ್ಕೆ ಮಂಜೂರಾತಿ ಪಡೆಯುವುದಕ್ಕೆ ಇದು ಒಂದು ಅವಕಾಶ. ಅದನ್ನು ನಾವು ಸದ್ಬಳಕೆ ಮಾಡಿಕೊಳ್ಳಬೇಕೆಂದು ನನ್ನ ಸಲಹೆ.

ಶ್ರೀ ಕೆ.ಎಸ್.ಈಶ್ವರಪ್ಪ:– ನನಗೆ ಮಾನ್ಯ ಎಲ್ಲಾ ಶಾಸಕರ ಕಳಕಳಿ ಅರ್ಥವಾಗಿದೆ. ನಾನು ಇದನ್ನು ಏಕೆ ಗಮನಕ್ಕೆ ತರುತ್ತಿದ್ದೇನೆ ಎಂದರೆ ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ತಿಳಿಸಿದ ಹಾಗೆ, ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು, ನಾವು ನೀವೆಲ್ಲಾ ಹೋದಾಗ ಕೂಡ ಇದರ ಬಗ್ಗೆ ಸ್ಪಷ್ಟಪಡಿಸಿದ್ದೇನೆ. ಹಾಗಾಗಿ ಗೋವಾ ಮುಖ್ಯಮಂತ್ರಿಗಳನ್ನು ಕರೆಸಿ ಕಳಸಾ ಬಂಡೂರಿ ಬಗ್ಗೆ ನಾನು convince ಮಾಡುತ್ತೇನೆಂದು ಹೇಳಿದರು. ಆದರೆ ಇವತ್ತಿನತನಕ ಮಾಡಲಿಲ್ಲ. ಅದಾದನಂತರ ಶ್ರೀಮತಿ ಸೋನಿಯಾ ಗಾಂಧೀಯವರು ಹೇಳಿಕೆಯನ್ನು ಕೊಟ್ಟರು. ಕೇಂದ್ರ ಸರ್ಕಾರಕ್ಕೆ ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ ಬಂದಿದ್ದಾರೆ. ರಾಜ್ಯ ಕಾಂಗ್ರೆಸ್ ಪಕ್ಷದವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅಲ್ಲಿಂದ ಕೂಡ ನಮಗೆ ಇನ್ನೂ result ಬಂದಿಲ್ಲ. ಮಾನ್ಯ ವಾಟಾಳ್ ನಾಗರಾಜ್ ತಿಳಿಸಿದ ಹಾಗೆ ಮಾನ್ಯ ಪ್ರಧಾನ ಮಂತ್ರಿಗಳ ಹತ್ತಿರ ಮತ್ತೆ ಮತ್ತೆ ಹೋಗುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ, ಹೋಗೋಣ. ನಮ್ಮ ಕಡೆಯಿಂದ ಬರೀ ಹೋಗುವುದೇ ಆಗಿದೆ. ಅವರು ಹತ್ತತ್ತು ಬಾರಿ ಪತ್ರಗಳು ಬರೆಯುತ್ತಾರೆ, ಅದಕ್ಕೆ ನಾವು ಉತ್ತರಗಳನ್ನು ಕಳುಹಿಸುತ್ತಿದ್ದೇವೆ. ಅಲ್ಲಿ ಅವರು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ ವಿನಃ ಅವರು ಕರ್ನಾಟಕ ರಾಜ್ಯದ

ಬಗ್ಗೆ ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುತ್ತಿದ್ದಾರೆ. ಅದನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು:– ಇದು ಬಹಳ ಗಂಭೀರವಾದ ಪ್ರಶ್ನೆ. ಈಗ ನೋಡಿ ಇನ್ನು ಹತ್ತು ನಿಮಿಷ ಇದೆ. ಇನ್ನೂ ಈಗ ಏಳನೇ ಪ್ರಶ್ನೆಯಲ್ಲಿ ಇದ್ದೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್:– ಕೇಂದ್ರ ಸರ್ಕಾರದವರು ಮಲತಾಯಿ ಧೋರಣೆ ತಾಳುತ್ತಿದ್ದಾರೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ, ಅದನ್ನು ಒಂದು ಕಡೆ ಒಪ್ಪಿಕೊಳ್ಳೋಣ. ತಮ್ಮಲ್ಲಿ ಈಗ ಇಚ್ಛಾಶಕ್ತಿ ಬೇಕಲ್ಲ. Scheme 'B'ನಲ್ಲಿ Krishna basinನಲ್ಲಿ 300 TMC ನೀರು ಬರದಿದ್ದರೂ 250 TMC ನೀರಾದರೂ ಬರುತ್ತದೆ. ಈ ಸರ್ಕಾರಕ್ಕೆ survey and investigation ಮಾಡುವುದಕ್ಕಾದರೂ ಇಚ್ಛಾಶಕ್ತಿ ಬೇಕಲ್ಲ. ನೀವು ಅದು ಏಕೆ ಮಾಡುತ್ತಿಲ್ಲ? ನಾವು ನೀವೇ ಮಾಡಿಲ್ಲವೆಂದು ಹೇಳುತ್ತಿಲ್ಲ. ಹಿಂದಿನ ಎಲ್ಲಾ ಸರ್ಕಾರದಲ್ಲಿ ನಾವು ವಿನಂತಿ ಮಾಡಿಕೊಂಡಿರುವುದು ಇದೆ. ಅಲ್ಲಿ 200 ಅಥವಾ 250 TMC ಯಾದರೂ ಬರಬಹುದು. ಅದಕ್ಕೆ survey and investigation ಮಾಡುವುದಕ್ಕೆ ಹತ್ತತ್ತು ವರ್ಷ ತೆಗೆದುಕೊಂಡರೆ ಯೋಜನೆಗಳು ಯಾವಾಗ ಕಾರ್ಯಗತವಾಗಬೇಕು ಎನ್ನುವುದನ್ನು ನೀವೇ ಹೇಳಿ ನೋಡೋಣ.

ಶ್ರೀ ಕೆ.ಎಸ್.ಈಶ್ವರಪ್ಪ:–ಹತ್ತತ್ತು ವರ್ಷದ್ದು ನನಗೆ ಸಂಬಂಧ ಇಲ್ಲ. ನನ್ನ ಪ್ರಶ್ನೆ ಅದಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್:– ನಿಮಗೂ ಸಂಬಂಧ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ:– ರಾಜಕೀಯ ಇಚ್ಛಾಶಕ್ತಿ ಬಗ್ಗೆ ನೀವು ಪ್ರಶ್ನೆ ಮಾಡಿರುವುದಕ್ಕೆ ನಾನು ಹೇಳುತ್ತಿದ್ದೇನೆ. ಈ ಸರ್ಕಾರದ ರಾಜಕೀಯ ಇಚ್ಛಾಶಕ್ತಿಯನ್ನು ತಾವು ಗಮನಿಸಿದ್ದೀರಾ?

ಶ್ರೀ ಶಿವಾನಂದ ಎಸ್.ಪಾಟೀಲ್:– ಕಳಸಾ ಬಂಡೂರಿ ಹೇಳುತ್ತಿದ್ದರೆ ಅದೇ ಇಚ್ಛಾಶಕ್ತಿ ಎಂದು ತಿಳಿದುಕೊಳ್ಳಬೇಡಿ. ನೀವು ಪದೇ ಪದೇ ಅದನ್ನೇ ಹೇಳಬೇಡಿ.

ಶ್ರೀ ಕೆ.ಎಸ್.ಈಶ್ವರಪ್ಪ:–ನಾವು ಕೇವಲ ಬಂಡೂರಿ ಬಗ್ಗೆ ಹೇಳುತ್ತಿಲ್ಲ. ನಾವು ಹೇಗೆ 39 projectಗಳನ್ನು ಮುಗಿಸಿದ್ದೇವೆ, ನಿಮ್ಮ ಬಿಜಾಪುರ ಮತ್ತು ಬಾಗಲಕೋಟೆಗೆ ಯಾವ ರೀತಿ 386 ಕೋಟಿ ರೂಪಾಯಿ ಖರ್ಚು ಮಾಡಿ ಕೆರೆಗೆ ನೀರು ತುಂಬಿಸುತ್ತಿದ್ದೇವೆ, ದಾವಣಗೆರೆಯಲ್ಲಿ ಹೇಗೆ ಮಾಡಿದ್ದೇವೆ, ನಾವು ಯಾವ ರೀತಿ ಕಾವೇರಿ beltನಲ್ಲಿ ಕೆರೆ ತುಂಬಿಸುತ್ತಿದ್ದೇವೆ. ನಮ್ಮ ರಾಜಕೀಯ ಇಚ್ಛಾಶಕ್ತಿ ಬಗ್ಗೆ ತಾವು ಏನು ಹೇಳುತ್ತೀರಿ, ಖಂಡಿತಾ ಆ ದಿಕ್ಕಿನಲ್ಲಿ ಹೋಗುತ್ತೇವೆ. ಇವತ್ತು ಬಂದಿರುವಂತಹ ಆಘಾತಕಾರಿ ಪತ್ರ ಏನಿದೆ, ಇದರ

ಬಗ್ಗೆ ನಾವೆಲ್ಲರೂ ಕೂಡ ಪಕ್ಷಾತೀತವಾಗಿ ಪ್ರಧಾನ ಮಂತ್ರಿಗಳಿಗೆ ಮತ್ತೆ ಒತ್ತಾಯ ಮಾಡೋಣ ಮತ್ತು ನಮಗೆ ನ್ಯಾಯ ತೆಗೆದುಕೊಳ್ಳುವ ದಿಕ್ಕಿನಲ್ಲಿ ಪ್ರಯತ್ನ ಮಾಡೋಣ.

ಗ್ರಾಮೀಣ ಮಟ್ಟದಲ್ಲಿ ಮಳೆ ನೀರು ಸಂಗ್ರಹಣೆ

ಶ್ರೀ ಐವಾನ್ ನಿಗ್ಲಿ (ನಾಮಾಂಕಿತ):-

188(1406) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರವು ರಾಜ್ಯದ ಬರಗಾಲ ಪೀಡಿತ ಗ್ರಾಮಗಳಲ್ಲಿ ಮಳೆನೀರು ಕೊಯ್ಲು ವಿಧಾನ ಅಳವಡಿಸುವ ಪ್ರಸ್ತಾಪ ಹೊಂದಿದೆಯೇ;

(ಆ) ಹೌದಾಗಿದ್ದಲ್ಲಿ, ವಿವರಗಳನ್ನು ಒದಗಿಸುವುದು;

(ಇ) ಇದಕ್ಕಾಗಿ ಕೇಂದ್ರದಿಂದ ನೀಡಿರುವ ಸಹಾಯಧನವೇನು ಮತ್ತು ರಾಜ್ಯದ ಪಾಲೇನು; (ವಿವರಗಳನ್ನು ಒದಗಿಸುವುದು)

(ಈ) ಇದರ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳಾವುವು?

(A) Whether the Government has any proposals for rain water harvesting in drought prone villages of the State;

(B) If yes, (details be furnished)

(C) The subsidy given by the Central Government and the State's share; (details be furnished)

(D) The measures taken by the Government to enlighten the general public?

ಶ್ರೀ ಎಸ್.ಎ.ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು):-

(ಅ) ಹೌದು.

(ಆ) ಅಂತರ್ಜಲ ಆಧಾರಿತ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳ ನಿರಂತರತೆ